ಪ್ರಶ್ನೆ.—೪೮ (೮೭)

ಶ್ರೀ ಎಸ್. ಆರ್. ಬೊಮ್ಮಾಯಿ —ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ತಡೆಹಿಡಿಯುವುದು ಬೇಕೆಂದು ಮತ್ತು ಮುಂದಿನವಾರ ಇದನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು.

ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆ ನಿಗಮಂ

೭೨. ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು) ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

ಅ) ಭದ್ರಾವತಿ ಕಬ್ಬಿಣ ಕಾರ್ಖಾನೆ ೧೯೮೨—೮೩ ನೇ ಸಾಲಿನಲ್ಲಿ ಎಷ್ಟು ಲಾಭ ಗಳಿಸಿದೆ;

ಆ) ಅಲ್ಲಿಯ ಕಾರ್ಮಿಕರ ಮತ್ತು ಕಂಟ್ರಾಕ್ಟ್ ಕಾರ್ಮಿಕರ ಸಂಖ್ಯೆ ಎಷ್ಟು,

ಇ) ಈ ಕಂಟ್ರಾಕ್ಟ್ ಕಾರ್ಮಿಕರನ್ನು ಖಾಯಂ ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಸ್. ಆರ್ ಬೊಮ್ಮಾಯಿ. (ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು).—

ಅ) ಲಾಭಗಳಿಸಿಲ್ಲ.

ಆ) ಕಾರ್ಖಾನೆಯಲ್ಲಿನ ಕಾರ್ಮಿಕರು.—

	ಸಂಖ್ಯೆ
೧. ಕಾರ್ಮಿಕ ವರ್ಗ	೧೧,೮೮೪
೨. ಅಧಿಕಾರ ವರ್ಗ	೬೬೨
ಒಟ್ಟು	೧೧,೫೪೬

ಇ. ಐ. ಎಸ್. ಎಲ್. ನವರು ಕಂಟ್ರಾಕ್ಟ್ ಕಾರ್ಮಿಕರುಗಳನ್ನು ನೇಮಿಸಿಕೊಂಡಿಲ್ಲ.

೨) ಮೇಲೆ ಹೇಳಿದ 'ಅ' ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದಭವಿಸುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಭದ್ರಾವತಿಯ ಕಬ್ಬಿಣ ಕಾರ್ಖಾನೆಯಲ್ಲಿ ಕಾಂಟ್ರಾಕ್ಟ್ ಕಾರ್ಮಿಕರನ್ನು ನೇಮಕ ಮಾಡಿಕೊಂಡಿಲ್ಲವೆಂದು ಸರ್ಕಾರದ ಅಫಿಪ್ರಾಯವೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾರ್ಖಾನೆಯವರು ಕಾಂಟ್ರಾಕ್ಟ್ ಕಾರ್ಮಿಕರನ್ನು ನೇಮಕ ಮಾಡಿಕೊಂಡಿಲ್ಲ. ಆದರೆ ಅಲ್ಲಿನ ಕೆಲಸಗಳನ್ನು ಯಾರು ಕಾಂಟ್ರಾಕ್ಟ್ ತೆಗೆದುಕೊಂಡಿದ್ದಾರೆ, ಅಂತಹವರು ಮಾತ್ರ ಕಾಂಟ್ರಾಕ್ಟ್ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ಕಂಟ್ರಾಕ್ಟ್ ಕಾರ್ಮಿಕರು ಕಾರ್ಖಾನೆಯಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿದ್ದಾರೋ ಅಥವಾ ಲೋಡಿಂಗ್ ಮತ್ತು ಅನ್—ಲೋಡಿಂಗ್ ಕೆಲಸ ಮಾಡಲು ಮಾತ್ರ ನೇಮಕವಾಗಿದ್ದಾರೋ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಗುತ್ತಿಗೆ ಕೆಲಸವನ್ನು ಪಡೆದವರು ಈ ಕಂಟ್ರಾಕ್ಟ್ ಕಾರ್ಮಿಕರಿಂದ ಗುತ್ತಿಗೆ ಕೆಲಸವನ್ನು ಮಾಡಿಸುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಕಂಟ್ರಾಕ್ಟ್ ಲೇಬರರ್ಸ್ ರೆಗ್ಯುಲೇಷನ್ ಅಂಡ್ ಅಬಾಲಿಷನ್ ಆಕ್ಟ್ ಇದೆ ಎಂಬುದು ತಮಗೆ ಗೊತ್ತಿದೆಯೇ ? ಇದರ ಪ್ರಕಾರ ಖಾಯಂ ಆಗಿ ಕೆಲಸ ಮಾಡುತ್ತಿರುವ ನೌಕರರಿಗೆ ಕೊಡುತ್ತಿರುವ ಸವಲತ್ತುಗಳನ್ನು ಈ ಕಂಟ್ರಾಕ್ಟ್ ಕಾರ್ಮಿಕರಿಗೂ ಕೊಡಬೇಕಾಗುತ್ತದೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಕಾನೂನು ಪ್ರಕಾರ ಈಗಾಗಲೇ ಅಲ್ಲಿನ ಸ್ಥಳೀಯ ಕಾರ್ಮಿಕರ ಸಂಘ ಮತ್ತು ಅಲ್ಲಿನ ಆಡಳಿತ ವರ್ಗದವರ ನಡುವೆ ಎರಡು ಪರ್ಷಗಳಿಂದ ಮಾತುಕತೆ

ನಡೆದಿದೆ. ಈ ಒಂದು ವಿವಾದ ಲೇಬರ್ ಕಮೀಷನ್ ಮುಂದೆ ಬಂದು, ಅದು ಒಂದು ತಿಂಗಳ ಹಿಂದೆ ಈ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲು ಒಂದು ಸಬ್‌ಕಮಿಟಿ ನೇಮಕ ಮಾಡಬೇಕೆಂದು ತಿಳಿಸಿದೆ. ಸರ್ಕಾರ ಆದಷ್ಟು ಬೇಗ ಈ ಸಬ್-ಕಮಿಟಿಯನ್ನು ನೇಮಕ ಮಾಡುತ್ತದೆ. ಯಾರು ಇಲ್ಲಿ ಬಹಳ ಕಾಲದಿಂದ ಕೆಲಸ ಮಾಡುತ್ತಿದ್ದಾರೆ, ಅಂತಹವರನ್ನು ಖಾಯಂ ಮಾಡಬೇಕೆಂದು ಈ ಕಾನೂನು ಹೇಳುತ್ತದೆ. ಈ ಕಾನೂನಿಗನುಗುಣವಾಗಿ ಕೆಲಸ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ;

ಶ್ರೀ ಪಂಪಾಪತಿ.—ಈಗ ಭದ್ರಾವತಿ ಕಾರ್ಖಾನೆಯಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿರುವವರು ೭೦೦ ರೂಪಾಯಿಗಳವರೆಗೆ ಪಗಾರ ಪಡೆಯುತ್ತಾರೆ. ಆದರೆ ಕಂಟ್ರಾಕ್ಟ್ ಕಾರ್ಮಿಕರಿಗೆ ದಿನವೊಂದಕ್ಕೆ ೫ ರಿಂದ ೬ ರೂಪಾಯಿಗಳವರೆಗೆ ಮಾತ್ರ ದಿನಕೂಲಿ ಕೊಡಲಾಗುತ್ತಿದೆ. ಈ ರೀತಿಯಿಂದ ಕಾರ್ಮಿಕರ ಹಕ್ಕನ್ನು ಮೊಟಕು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತು ಈ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದವರ ಅಗ್ರಿಮೆಂಟ್‌ನ್ನು ತಾವು ಕಾರ್ಯಗತ ಮಾಡಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಏನೇನು ಸಂಬಳಸಾರಿಗೆ ಕೊಡಬೇಕೆಂದು ಹೇಳಿದ್ದಾರೆ, ಅದರಂತೆ ಕೊಡಲಾಗುತ್ತದೆ.

ಶ್ರೀ ಎಸ್. ಮಹದೇವ್.—ಈಗ ಭದ್ರಾವತಿ ಕಾರ್ಖಾನೆಯಲ್ಲಿ ಟೆಂಪರರಿಯಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ? ಅಲ್ಲಿ ಒಂದೆರಡು ವರ್ಷಗಳಿಂದ ಕೆಲಸ ಮಾಡುತ್ತಿರುವವರನ್ನು ಖಾಯಂಗೊಳಿಸದೆ ಇತ್ತೀಚೆಗೆ ಸೇರಿದವರನ್ನು ಖಾಯಂ ಮಾಡಿದ್ದಾರೆಂಬ ದೂರುಗಳು ಬಂದಿದೆ. ಇದು ಸರ್ಕಾರದ ಗಮನಕ್ಕೂ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದೆರಡು ವರ್ಷಗಳಿಂದ ಅಲ್ಲ, ೧೫—೨೦ ವರ್ಷಗಳಿಂದ ಕೆಲವರು ಕೆಲಸ ಮಾಡುತ್ತಿದ್ದಾರೆ. ಇದು ಒಂದು ವರ್ಷದ ಪ್ರಶ್ನೆಯಲ್ಲ. ಇಂತಹವರ ವಿಚಾರದಲ್ಲಿ ಕಂಟ್ರಾಕ್ಟ್ ಲೇಬರರ್ಸ್ ರೆಗ್ಯುಲೇಷನ್ ಅಂಡ್ ಅಬಾಲಿಷನ್ ಆಕ್ಟ್ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ಕಾರ್ಮಿಕರ ಸಮಸ್ಯೆಗಳನ್ನು ಪರಿಶೀಲಿಸಲು ಈ ಹಿಂದಿನ ಸರ್ಕಾರ ಶ್ರೀ ಎಸ್. ಬಿ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿತ್ತು. ಆ ಕಮಿಟಿಯವರು ಸರ್ಕಾರಕ್ಕೆ ಕೆಲವೊಂದು ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನು ಜಾರಿಗೆ ತರಲು ಸರ್ಕಾರ ಆಲೋಚನೆ ಮಾಡುತ್ತಿದೆಯೇ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಮಿತಿಯವರು ಏನೇನು ಸಲಹೆಗಳನ್ನು ಮಾಡಿದ್ದಾರೆಂಬುದನ್ನು ನಾನು ನೋಡುತ್ತೇನೆ.

ಧಾರವಾಡ ಜಿಲ್ಲೆಯಲ್ಲಿ ವರದಾನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣ

೫೧(೪೭) ಶ್ರೀ ಎಂ. ಎಂ. ನಡಾಫ್ (ಶಿಗಾಂವಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಧಾರವಾಡ ಡಿಸ್ಟ್ರಿಕ್ಟ್, ಸವಣೂರು ತಾಲ್ಲೂಕಿನ ಕುಸಿಮೆಲ್ಲಿ ಹಳ್ಳಿಯ ಬಳಿ ವರದಾ ನದಿಗೆ ಅಡ್ಡಲಾಗಿ ಒಂದು ಬ್ಯಾರೇಜ್ ಕಟ್ಟುವ ಕೆಲಸವು ಬಹಳ ಹಿಂದೆಯೇ ಮಂಜೂರಾಗಿದೆಯೆಂದೂ ಮಂತ್ರಿ ಅಯವ್ಯಯ ಪಟ್ಟಿಯಲ್ಲಿ ಸೇರಿತ್ತು, ಎಂದೂ ಸರ್ಕಾರದ ಗಮನಕ್ಕೆ ಬಂದಿದೆಯೆ.

(ಆ) ನೀರಾವರಿ ಇಲಾಖೆಯ ಅಭಿಯಂತರರು ೧೫ ಮಿಲಿಯ ಮೇಲೆ ಹೇಳಿದ ಬ್ಯಾರೇಜ್ ಕೆಲಸಕ್ಕೆ ಈಗಾಗಲೇ ಪರಿಷ್ಕೃತ ನಕ್ಷೆ ಮಂತ್ರಿ ಅಂದಾಜುಗಳನ್ನು ಶೀಘ್ರ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿರುವುದು ನಿಜವೇ ?